**SC No.219/2022**
**P.W. 1**

<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**SC No. 219/2022 P.W. 1**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **21.01.2026** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

<u>ಆದೇಶ ದಿನಾಂಕ **19.11.2025** ರಂತ ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ವಕೀಲರಿಂದ :</u> ನನಗೆ ಮಾಹಿತಿ ಬಂದ ನಂತರ 1.45 ನಿಮಿಷ ಆದ ನಂತರ ಸ್ಥಳಕ್ಕೆ ಹೋದೆ. ನಾವು ಸುಮಾರು 5 ನಿಮಿಷಗಳ ಕಾಲ ಅವರನ್ನು ಗಮನಿಸಿದೆವು. ಆ ಸ್ಥಳದಲ್ಲಿ ಇದ್ದ ಯಾವುದೇ ಸಾರ್ವಜನಿಕರ ಸಹಿಯನ್ನು ಮಹಜರ್ ಗೆ ಪಡೆದುಕೊಂಡಿಲ್ಲ. ನಾವು ತೂಕದ ಯಂತ್ರದಲ್ಲಿ ತೂಕ ಮಾಡಿದರೆ ನಿಖರವಾಗಿ ತೂಕ ಹೇಳಬಹುದು. ಎಷ್ಟು ಗ್ರಾಂ ತೂಕ ಇತ್ತು ಎಂದು ನಾವು ನಿಖರವಾಗಿ ಹೇಳಿಲ್ಲ. ನಾವು ಒಂದೇ ವಾಹನದಲ್ಲಿ 7 ಜನರು ಹೋಗಿದ್ದೆವು. ಆರೋಪಿತರನ್ನು ಕರೆದುಕೊಂಡು ಹೋಗುವಾಗ ಬೇರೆ ವಾಹನ ಮಾಡಿರಬಹುದು ನೆನಪಿಲ್ಲ. ನಾನು ಆರೋಪಿತರನ್ನು ಯಾವ ವಾಹನದಲ್ಲಿ ಕರೆದುಕೊಂಡು ಬಂದೆ ಎಂದು ಹೇಳಿಕೆ ನೀಡಿಲ್ಲ. ನಾವು ಸುಮಾರು 50 ಮೀಟರ್ ದೂರದಲ್ಲಿ ಆರೋಪಿತರನ್ನು ನೋಡಿದ್ದೆವು. ಎಷ್ಟು ಜನರು ನಡೆದುಕೊಂಡು ಹೋಗುತ್ತಿದ್ದರು ಎಂದು ಗಮನಿಸಲಿಲ್ಲ. ಯಾವ ಸಿಬ್ಬಂದಿ ಪಂಚರನ್ನು ಕರೆದುಕೊಂಡು ಎಂದರು ಎಂದು ಎಲ್ಲಿಯೂ ಹೇಳಿಲ್ಲ. ಎಲ್ಲಾ ಹತ್ತಿರದ ಠಾಣೆಗಳ ನಂಬರ್ ಗಳು ನಮ್ಮ ಬಳಿ ಇರುತ್ತದೆ. ನಾವು ಹತ್ತಿರದ ಠಾಣೆಗೂ ಘಟನೆ ಬಗ್ಗೆ ಹೇಳಿಲ್ಲ. ನಾವು ಆರೋಪಿತರನ್ನು ಆ ಸ್ಥಳದಲ್ಲಿ ಆ ದಿನ ವಶಕ್ಕೆ ಪಡೆದಿಲ್ಲ ಎಂದರೆ ಸರಿ ಅಲ್ಲ. ಅಂಕಿ ಅಂಶಕ್ಕಾಗಿ ಸುಳ್ಳು ವರದಿ ನೀಡಿ ಸುಳ್ಳು ಮಹಜರ್ ಮಾಡಿರುತ್ತೇನೆ ಎಂದರೆ ಸರಿ ಅಲ್ಲ. ಪಂಚರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ, ಅವರ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿ ಅಲ್ಲ. ಆರೋಪಿತರನ ವಿರುದ್ಧ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.